# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

## ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರಿಗೆ ಪ್ರಬಂಧ ಸ್ಪರ್ಧೆ 2021-22 (ಕನ್ನಡ ಮತ್ತು ಇಂಗ್ಲೀಷ್)

## ಸ್ಪರ್ಧೆಯ ವಿಷಯಗಳು ಮತ್ತು ಸೂಚನೆಗಳು

### 1.0 ಪೀಠಿಕೆ

ಇಂದಿನ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನವು ನಮ್ಮ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾಗಿದ್ದು, ಪದ ಸಂಸ್ಕರಣೆಯಲ್ಲಿ ಸುಲಭೀಕರಣ, ವಿವಿಧ ಸಾಧನಗಳ ಮಧ್ಯ ನಮ್ಮ ಕೆಲಸವನ್ನು ಸಂಯೋಜಿಸಲು ಅಭಿವೃದ್ಧಿ ಪಡಿಸಿರುವ ತಂತ್ರಾಶಗಳು, ಕೈಬರಹದ ಉದ್ದೇಶವನ್ನು ಬಹುತೇಕವಾಗಿ ಕಡಿಮೆ ಮಾಡಿದೆ. ಆದರೆ, ಕೈಬರಹವು ನಾವು ಅಂದುಕೊಂಡಿರುವುದಕ್ಕಿಂತ ಹೆಚ್ಚಿನ ಉಪಯುಕ್ತತೆಯನ್ನು ಹೊಂದಿದೆ. ಇದು ನಮ್ಮ ಓದುವಿಕೆ ಮತ್ತು ಭಾಷಾ ಸಂಸ್ಕರಣೆ ಕೌಶಲ್ಯಗಳನ್ನು ಬಲಪಡಿಸುತ್ತದೆ, ನಮ್ಮ ಜ್ಞಾಪಕ ಶಕ್ತಿಯನ್ನು ಸುಧಾರಿಸುತ್ತದೆ ಮತ್ತು ನವ ಆಲೋಚನೆಗಳ ಬಗ್ಗೆ ಕೆಲಸ ಮಾಡುವಾಗ ಬೆರಳಚ್ಚಿಗೆ ಹೋಲಿಸಿದರೆ ನಾವು ಕೈಬರಹದ ಮೂಲಕ ಕಲಿತದ್ದನ್ನು ನೆನಪಿನಲ್ಲಿಟ್ಟುಕೊಳ್ಳಬಹುದು. ಅಲ್ಲದೆ, ಬರವಣಿಗೆಯು ಮೆದುಳಿನಲ್ಲಿ ವಿಶಿಷ್ಟವಾದ ಪಥಗಳನ್ನು ಸೃಷ್ಟಿಸುತ್ತದೆ ಮತ್ತು ಅದು ಬೆರಳಚ್ಚಿಸಿದವರಿಗಿಂತ ಹೆಚ್ಚು ವಿಷಯವನ್ನು ನೆನಪಿನಲಿಟ್ಟುಕೊಳ್ಳಲು ಸಹಾಯಕವಾಗಿದೆ ಎಂಬುದು ಸಂಶೋಧನೆಯಿಂದ ದೃಢಪಟ್ಟಿದೆ.

ಬರವಣಿಗೆ ಕೌಶಲಗಳನ್ನು ಸುಧಾರಿಸಲು ಪ್ರಬಂಧವು ಒಂದು ಪ್ರಮುಖ ಸಾಧನವಾಗಿದೆ. ಅದು ಒಂದು ವಾದವನ್ನು ಮಂಡಿಸುವ ಸಾಮರ್ಥ್ಯ ಹಾಗೂ ಸ್ಪಷ್ಟ, ಸುಸಂಬದ್ಧ ಮತ್ತು ಮನವೊಲಿಸುವ ಧಾರಣಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ. ಇದು ಕೌಶಲ್ಯ ಮತ್ತು ಬೌದ್ಧಿಕ/ ವಿಚಾರ ಶಕ್ತಿಯ ಸಾಮರ್ಥ್ಯವನ್ನು ನೀಡುತ್ತದೆ.

ಈ ದೃಷ್ಟಿಕೋನವನ್ನು ಗಮನದಲ್ಲಿರಿಸಿಕೊಂಡು ಅಕಾಡೆಮಿಯು ಪದವಿ, ಸ್ನಾತಕೋತ್ತರ ಪದವಿ ಮತ್ತು ಜನಸಾಮಾನ್ಯರಿಗಾಗಿ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಪ್ರಬಂಧ ಸ್ಪರ್ಧೆ ನಡೆಸುತ್ತಿದೆ.

## 2.0 ಪ್ರಬಂಧ ಸ್ಪರ್ಧೆಯ ವಿಷಯಗಳು 2020

| ಭಾಷೆ/ Language | ಸ್ನಾತಕೋತ್ತರ ಪದವಿ/ PG Level | ಪದವಿ/ UG Level | ಜನಸಾಮಾನ್ಯರು/ General Public |
|---|---|---|---|
| ಕನ್ನಡ | ಭವಿಷ್ಯದ ಇಂಧನ: ಜಲಜನಕ | ಜಾಗತಿಕ ತಾಪಮಾನ ಏರಿಕೆಯನ್ನು ತಗ್ಗಿಸುವಲ್ಲಿ ಭಾರತದ ಸಾಧನೆಗಳು | ಜಾಗತಿಕ ತಾಪಮಾನ ಏರಿಕೆಯನ್ನು ತಗ್ಗಿಸುವಲ್ಲಿ ನಾಗರೀಕರ ಜವಾಬ್ದಾರಿ |
| ಇಂಗ್ಲೀಷ್ | Fuel of the Future: Hydrogen | Global Warming Mitigation: Achievements of India | Citizen Responsibility in Mitigating Global Warming |

## 3.0 ಪ್ರಬಂಧ ಗಾತ್ರ

ಪ್ರಬಂಧವು A4 ಗಾತ್ರದ ಪುಟದಲ್ಲಿ ಡಬಲ್ ಲೈನ್ ಸ್ಪೇಸ್ ನೊಂದಿಗೆ 3000 ಪದಗಳು ಅಥವಾ 10 ಪುಟಗಳನ್ನು ಮೀರುವಂತಿಲ್ಲ. ಯಾವುದೇ ಕೆಳಮಿತಿ ಸೂಚಿಸುತ್ತಿಲ್ಲವಾದರೂ 750 ಪದಗಳಿಗಿಂತ ಕಡಿಮೆ ಇರುವ ಪ್ರಬಂಧಗಳನ್ನು ಪರಿಗಣಿಸಲಾಗುವುದಿಲ್ಲ

## 4.0 ಪ್ರಬಂಧ ಸ್ವರೂಪದ ಬಗ್ಗೆ ಸಲಹೆ

ಪ್ರಬಂಧವನ್ನು ವಿವಿಧ ವಿಭಾಗಗಳಾದ ಪ್ರಸ್ತಾವನೆ/ಪೀಠಿಕೆ, ವಿಷಯ ನಿರೂಪಣೆ, ಉಪಸಂಹಾರ/ನಿರ್ಣಯ ಮತ್ತು ಉಲ್ಲೇಖಗಳ ಪಟ್ಟಿಯನ್ನೊಳಗೊಂಡಂತೆ ರಚಿಸಬಹುದು. ಇದು ಕೇವಲ ಒಂದು ಸೂಚಿತ ಮತ್ತು ಕನಿಷ್ಠ ನಿರೀಕ್ಷಿತ ಸ್ವರೂಪವಾಗಿದ್ದು, ಅಗತ್ಯ ಮತ್ತು ಸಮಂಜಸವೆನಿಸುವ ಇತರ ವಿಭಾಗಗಳನ್ನು ಸ್ಪರ್ಧಿಯು ಅಳವಡಿಸಿಕೊಳ್ಳಬಹುದು.

## 5.0 ಮೌಲ್ಯಮಾಪನ ಮಾನದಂಡ

ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ಪ್ರಬಂಧಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ:

- ✓ ವಿಷಯಕ್ಕಿರುವ ಸಂಬಂಧ ಮತ್ತು ಸ್ವಂತಿಕೆ (30%)
- ✓ ಸಂಪರ್ಕ ಮತ್ತು ಸುಸಂಬದ್ಧತೆ, ರಚನೆ ಮತ್ತು ಪದಮಿತಿಯ ಪಾಲನೆ (20%)
- ✓ ಸೃಜನಶೀಲತೆ ಮತ್ತು ಪ್ರಸ್ತುತಿ (30%)

✓ ಭಾಷೆ, ಅನುಸಂಧಾನ, ನಿರರ್ಗಳತೆ, ಸಾಮರ್ಥ್ಯ (ಅಕ್ಷರಗಳು, ಪದಗಳು ಮತ್ತು ರೇಖೆಗಳ ನಡುವಿನ ಅಂತರ; ಅಕ್ಷರಗಾತ್ರ ಮತ್ತು ಸ್ವರೂಪಗಳಲ್ಲಿ ಸ್ಥಿರತೆ; ಅಚ್ಚುಕಟ್ಟು ಮತ್ತು ಸೊಬಗು) (20%)

## 6.0 ನಿಮ್ಮ ಪ್ರಬಂಧವನ್ನು ಸಲ್ಲಿಸುವುದು ಹೇಗೆ

- ನಿಮ್ಮ ಕೈ ಬರಹದ ಪ್ರಬಂಧವನ್ನು (ಹಾರ್ಡ್ ಕಾಪಿ) ಅಂಚೆಯ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಮತ್ತು ಸ್ಕ್ಯಾನ್ ಮಾಡಿದ ಪ್ರತಿಯನ್ನು (pdf ಸ್ವರೂಪ) ನಮ್ಮ ಇ-ಮೇಲ್ ಗೆ ಕಳುಹಿಸಿ : essay.ksta@gmail.com
- ವಿಳಾಸ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಪ್ರೊ.ಯು.ಆರ್.ರಾವ್ ವಿಜ್ಞಾನ ಭವನ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ತೋಟಗಾರಿಕೆ ವಿಜ್ಞಾನ ಕಾಲೇಜು ಪ್ರವೇಶ ದ್ವಾರ ಬಳಿ, ಜಿಕೆವಿಕೆ, ವಿದ್ಯಾರಣ್ಯಪುರ ಅಂಚೆ, ಯಲಹಂಕ, ಬೆಂಗಳೂರು – 560 097
- ಸ್ಕ್ಯಾನ್ ಮಾಡಿದ ಫೈಲ್ ನ ಹೆಸರನ್ನು (pdf ಸ್ವರೂಪ ಮಾತ್ರ) [name-category] ನಮೂನೆಯಲ್ಲಿ ಹೆಸರಿಸಿ. ಇಲ್ಲಿ ಹೆಸರು = ನಿಮ್ಮ ಹೆಸರು (initials ಹೊರತುಪಡಿಸಿ) ಮತ್ತು ವರ್ಗ = ಪದವಿ (UG), ಸ್ನಾತಕೋತ್ತರ ಪದವೀಧರ (**PG**) ಮತ್ತು ಜನಸಾಮಾನ್ಯರು (**GP**) ಉದಾ: ನಿಮ್ಮ ಹೆಸರು Vivekananda ಮತ್ತು ನೀವು ಪದವಿ (**UG**) ವರ್ಗದಲ್ಲಿ ಅರ್ಜಿ ಸಲ್ಲಿಸುತ್ತಿದ್ದರೆ - ಫೈಲ್ ನ ಹೆಸರು Vivekananda-UG ಎಂದಾಗುತ್ತದೆ.
- ನಿಮ್ಮ ಪ್ರಬಂಧದ ಜೊತೆಗೆ ಗುರುತಿನ ಚೀಟಿ, ವಿಳಾಸ ಮತ್ತು ವಯಸ್ಸಿನ (ಆಧಾರ್, ವೋಟರ್ ಐಡಿ) ಪುರಾವೆ (ಪೋಸ್ಟ್ ಮೂಲಕ ಹಾರ್ಡ್ ಕಾಪಿ ಮತ್ತು ಸಾಫ್ಟ್ ಕಾಪಿ ಯನ್ನು ಮೇಲೆ ನೀಡಿರುವ ಇಮೇಲ್ ಗೆ ಸಲ್ಲಿಸಿ). ಸ್ಕ್ಯಾನ್ ಮಾಡಿದ ಫೈಲ್ (jpeg ಸ್ವರೂಪದಲ್ಲಿ)ನ್ನು ಹೆಸರಿಸುವಾಗ ಮೇಲಿನ ನಾಮಕರಣ ವಿಧಾನವನ್ನು ಅನುಸರಿಸಿ.

## 7.0 ವಿಶೇಷ ಸೂಚನೆ

- ಈ ದಾಖಲೆಯಲ್ಲಿ ಒದಗಿಸಲಾದ ಸೂಚನೆಗಳು/ಮಾರ್ಗಸೂಚಿಗಳು ಈಗಾಗಲೇ ವೆಬ್ ಸೈಟ್ ನಲ್ಲಿ ಪ್ರಕಟಿತ ಸೂಚನೆಗಳು/ಮಾರ್ಗಸೂಚಿಗಳ ಮುಂದುವರಿದ ಭಾಗ.
- ಕೃತಿಚೌರ್ಯಕ್ಕೆ ಸ್ವೀಕಾರವಿಲ್ಲ ಮತ್ತು ಈ ಸಂಬಂಧ ಮೌಲ್ಯಮಾಪನದ ಸಮಯದಲ್ಲಿ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಲಾಗುವುದು ಮತ್ತು ಅದನ್ನು ತಿರಸ್ಕರಿಸಲಾಗುವುದು.

- ಪ್ರತಿ ಸ್ಪರ್ಧಿಗೆ ಒಂದು ಸಲ್ಲಿಕೆಗೆ ಮಾತ್ರ ಅವಕಾಶ ನೀಡಲಾಗಿದೆ. ಒಬ್ಬ ಸ್ಪರ್ಧಿಯು ಕನ್ನಡ ಅಥವಾ ಇಂಗ್ಲೀಷ್, ಯಾವುದಾದರೊಂದರಲ್ಲಿ ಪ್ರಬಂಧವನ್ನು ಸಲ್ಲಿಸಬಹುದು. ಒಂದು ವೇಳೆ ಯಾವುದೇ ಸ್ಪರ್ಧಿಯು ಒಂದು ನಿರ್ದಿಷ್ಟ ಭಾಷೆಯಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ, ಆ ಸ್ಪರ್ಧಿಯು ಸಲ್ಲಿಸಿದ ಎಲ್ಲಾ ನಮೂದುಗಳನ್ನು ಅಸಿಂಧುವೆಂದು ಪರಿಗಣಿಸಲಾಗುತ್ತದೆ.
- ಯಾವುದೇ ಬಾಲ್ ಪಾಯಿಂಟ್ ಪೆನ್ ಅಥವಾ ಫೌಂಟೆನ್ ಪೆನ್ ಬಳಸಿ ಪ್ರಬಂಧ ಬರೆಯುವುದು. ದಯವಿಟ್ಟು ಕಪ್ಪು ಶಾಯಿ ಮತ್ತು ಬಿಳಿ ಬಣ್ಣದ ಕಾಗದವನ್ನು (ಸಾದಾ ಅಥವಾ ಸಾಲುಗಳನ್ನು ಹೊಂದಿರುವ) ಮಾತ್ರ ಬಳಸಿ.
- ನಿಮ್ಮ ಪ್ರಬಂಧದ ಕೊನೆಯಲ್ಲಿ (ಮುಂಭಾಗದಲ್ಲಿ ಅಲ್ಲ), ನಿಮ್ಮ ಹೆಸರು, ವಿಳಾಸ, ಜನವರಿ 1, 2021ರಂದು ತಮಗಾಗಲಿರುವ ವಯಸ್ಸು (ವಯಸ್ಸಿನ ಪುರಾವೆಯನ್ನು ಲಗತ್ತಿಸಬೇಕು), ಸಂಪರ್ಕ ಸಂಖ್ಯೆ ಮತ್ತು ಇ-ಮೇಲ್ ವಿವರಗಳನ್ನು ನೀಡುವುದು.
- ಗೀಚುವುದು ಅಥವಾ ಅಳಿಸುವುದನ್ನು ಮಾಡಬೇಡಿ. ಕರಡು ಪ್ರತಿಗಳನ್ನು ಕಳುಹಿಸಬೇಡಿ. ನೀವು ತಪ್ಪು ಮಾಡಿದರೆ, ಆ ಪುಟವನ್ನು ಪುನಃ ಆರಂಭಿಸಿ.
- ಆಯ್ಕೆಯಾದ ಪ್ರಬಂಧಗಳ ಸ್ಪರ್ಧಿಗಳ ಹೆಸರು, ಫೋಟೋ ಮತ್ತು ವಿವರಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುತ್ತದೆ ಇದಕ್ಕೆ ಯಾವುದೇ ಪೂರ್ವಾನುಮತಿಯನ್ನು ಕೋರಲಾಗುವುದಿಲ್ಲ. ನಿಮ್ಮ ಪ್ರಬಂಧವನ್ನು ಸ್ಪರ್ಧೆಗೆ ಕಳುಹಿಸುವುದರ ಮೂಲಕ ಆನ್ ಲೈನ್ ಅಥವಾ ಡಿಜಿಟಲ್ ಮ್ಯಾಗಜಿನ್ ಗಳಲ್ಲಿ ಪ್ರಕಟಿಸುವ ಅಧಿಕಾರ ನಮಗೆ ನೀಡಿದಂತಾಗುತ್ತದೆ. ಆದರೆ, ಲೇಖನವನ್ನು ಎಲ್ಲಿಯೂ ಪ್ರಕಟಿಸುವ ಆಸಕ್ತಿಯನ್ನು ತಾವು ಹೊಂದಿಲ್ಲದಿದ್ದರೆ ಆರಂಭದಲ್ಲಿಯೇ ತಮ್ಮ ನಿರಾಸಕ್ತಿಯನ್ನು ಸೂಚಿಸುವುದು.
- ಎಲ್ಲಾ ನಮೂದುಗಳು ಅಕಾಡೆಮಿಯ ಆಸ್ತಿಯಾಗುತ್ತದೆ ಮತ್ತು ಅದನ್ನು ಹಿಂದಿರುಗಿಸಲಾಗುವುದಿಲ್ಲ